ದಿನಾಂಕಃ 20-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ನಿಪಿ-6 ಫೋಟೋಟವನ್ನು ಆರೋಪಿಯ ಮನೆಯಲ್ಲಿ ತೆಗೆದಿರುತ್ತಾರೆ. ಆರೋಪಿ ಮನೆಯಲ್ಲಿ ಏನು ಘಟನೆ ನಡೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿ ಹೆಂಡತಿ ಹೆಸರು ರತ್ನಮ್ಮ, ರತ್ನಮ್ಮ ತೀರಿಕೊಂಡಿರುತ್ತಾಳೆ. ರತ್ನಮ್ಮನ ಸಾವು ಹೇಗೆ ಸಂಭವಿಸಿತು, ರತ್ನಮ್ಮನ ಸಾವಿಗೆ ಯಾರು ಕಾರಣ ಎಂದು ನನಗೆ ಗೊತ್ತಿಲ್ಲ. ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ದಿ. 05.04.2024 ರಂದು ಸಾಯಂಕಾಲ 5-00 ರಿಂದ 6-00 ಗಂಟೆಗೆ ಆರೋಪಿ ಈರಣ್ಣನ ಮನೆಯಲ್ಲಿ ನಾನು ಹಾಜರಿದ್ದು ಸದರಿ ಜಾಗದಲ್ಲಿ ರತ್ನಮ್ಮಳಿಗೆ ಆರೋಪಿ ಈರಣ್ಣ ಪ್ರತಿ ದಿನ ಮಾನಸಿಕ ಮತ್ತು ದೈಹಿಕ ಹಿಂಸೆ ಕೊಟ್ಟು ದಿ. 04.04.2024 ರಂದು ಸಾಯಂಕಾಲ 4-30 ಗಂಟೆಗೆ ಆರೋಪಿ ಈರಣ್ಣ ತನ್ನ ಹೆಂಡತಿ ರತ್ನಮ್ಮಳಿಗೆ ಮನೆಯಲ್ಲಿ ಗಲಾಟೆ ಮಾಡಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಚೋದನೆ ನೀಡಿರುತ್ತಾನೆಂದು ಜಾಗ ತೋರಿಸಿದ್ದು ಸದರಿ ಜಾಗದಲ್ಲಿ ನಿಪಿ-5 ರಂತೆ ಪಂಚನಾಮೆ ಮಾಡಿ , ಪಂಚನಾಮೆ ಕಾಲಕ್ಕೆ ನೇಣು ಹಾಕಿಕೊಳ್ಳಲು ಬಳಸಿದ್ದ ಸೀರೆಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಯಾವಾಗಲು ಕುಡಿದು ಬಂದು ಹೆಂಡತಿ ಮೇಲೆ ಗಲಾಟೆ ಮಾಡಿ ಮನೆ ಬಿಟ್ಟು ಹೋಗಿ ಎಲ್ಲಾದರೂ ಸಾಯಿ ಎಂದು ಬೈಯ್ಯುತ್ತಿದ್ದ , ನಾವೆಲ್ಲರೂ ಸೇರಿ ಆತನಿಗೆ ಬುದ್ದಿವಾದ ಹೆಳಿದ್ದೇವು ಎಂದರೆ ಸರಿಯಲ್ಲ. ಆದರೂ ಕೂಡ ದಿ. 04.004.2024 ರಂದೆ ಸಾಯಂಕಾಲ 5-00 ಗಂಟೆಗೆ ನಾನು ಬಸ್ ನಿಲ್ದಾಣದ ಬಳಿ ಇದ್ದಾಗ ಆರೋಪಿ ಈರಣ್ಣನ ಮನೆ ಬಳಿ ಜನ ಕೂಗಾಡುವ ಶಬ್ದ ಕೇಳಿ ನಾನು ಹೋಗಿ ನೋಡಲಾಗಿ ಈರಣ್ಣನ ಹೆಂಡತಿ ರತ್ನಮ್ಮ ತನ್ನ ಮನೆಯ ಅಡಿಗೆ ಕೋಣೆಯಲ್ಲಿನ ಮೆಲ್ವಾವಣಿಯ

ಕಬ್ಬಿಣದ ಹ್ಯಾಂಗರ್ ಗೆ ಸೀರೆ ಸಹಾಯದಿಂದ ನೇಣು ಹಾಕಿಕೊಂಡಿದ್ದಳು ಆಗ ಸ್ಥಳದಲ್ಲಿದ್ದ ಆರೋಪಿ ಈರಣ್ಣ , ನಾಗಮ್ಮ , ಲಕ್ಷ್ಮಮ್ಮ ರವರು ನೇಣು ಕುಣಿಕೆಯಿಂದ ರತ್ನಮ್ಮನನ್ನು ಇಳಿಸಿದರು ಸ್ಥಳದಲ್ಲಿದ್ದ ರತ್ನಮ್ಮನ ಮಗ ಚಾಸಾ-2 ರವರನ್ನು ವಿಚಾರಿಸಿದಾಗ ಆತನು ನನ್ನ ಅಪ್ಪ ಅಮ್ಮನ ಹತ್ತಿರ ದುಡ್ಡು ಕೇಳಿದ ನನ್ನ ಅಮ್ಮ ದುಡ್ಡು ಇಲ್ಲ ಎಂದು ಹೇಳಿದ್ದಕ್ಕೆ ಕಿವಿಯಲ್ಲಿರುವ ಗುಂಡು ಬಿಚ್ಚಿಕೊಡು ಅದನ್ನು ಅಡಮಾನ ಇಡುತ್ತೇನೆ ಎಂದು ಕೇಳಿದಾಗ ನನ್ನ ಅಮ್ಮ ಕೊಡದೇ ಇದುದ್ದಾಗ ಬೈದು ನೀನು ನೇಣು ಹಾಕಿಕೊಂಡು ಸತ್ತರೆ ನನಗೆ ನೆಮ್ಮದಿ ಸಿಗುತ್ತದೆ ಎಂದು ಬೈದು ಮನೆಯ ಹೊರಗಡೆ ಬಂದು ಕುಳಿತುಕೊಂಡನು ನನ್ನ ಅಮ್ಮ ಅಡಿಗೆ ಕೋಣೆಗೆ ಹೋಗಿ ನೇಣು ಹಾಕಿಕೊಂಡಿರುತ್ತಾಳೆಂದು ತಿಳಿಸಿದನು ಎಂದರೆ ಸರಿಯಲ್ಲ. ನಂತರ ರಂಗಯ್ಯ , ರಂಗಮ್ಮ , ಈರಣ್ಣ , ರತ್ನಮ್ಮಳನ್ನು ಆಂಬುಲೆಯನ್ಸ್ ನಲ್ಲಿ ಪಾವಗಡ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದು ರಾತ್ರಿ 10-30 ಗಂಟೆಗೆ ಹೆಚ್ಚಿನ ಚಿಕಿತ್ತೆಗೆ ತುಮಕೂರಿಗೆ ಹೋಗುವಾಗ ಕೊರಗೆರೆ ಸಮೀಪ ರತ್ನಮ್ಮ ಮೃತಪಟ್ಟಿರುತ್ತಾಳೆಂದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯ ಪ್ರಚೋದನೆಯಿಂದಲೇ ರತ್ನಮ್ಮ ನೇಣುಹಾಕಿಕೊಂಡಿರುತ್ತಾಳೆ ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈಗ ಹೇಳಿದ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ನನಗೆ ಈ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ- ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**